Panchayati Raj

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಕಗ್ಗಲೀಪುರ ಗ್ರಾಮ ಪಂಚಾಯತಿ
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
Email : kaggalipuragp@gmail.com Phone : +91 89519 81991

ಸಂಖ್ಯೆ: ಕ.ಗ್ರಾ.ಪಂ/35/2024-25 ದಿನಾಂಕ: 24-06-2024

# -: ನೀರಾಕ್ಷೇಪಣಾ ಪತ್ರ:-

ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲೀಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಗ್ಗಲೀಪುರ ಗ್ರಾಮದ ಸರ್ವೆ ನಂ. **24/2 ರಲ್ಲಿ 0ಎ-20ಗುಂಟೆ, ಸರ್ವೆ ನಂ. 25/2ರಲ್ಲಿ 3ಎ-00ಗುಂಟೆ, ಸರ್ವೆ ನಂ.27/3ರಲ್ಲಿ 0ಎ-7ಗುಂ, ಸರ್ವೆ ನಂ. 26/1ರಲ್ಲಿ 0ಎ-15ಗುಂಟೆ, ಸರ್ವೆ ನಂ.26/2ರಲ್ಲಿ 0ಎ-3ಗುಂಟೆ, ಮತ್ತು ಸರ್ವೆ ನಂ. 27/4ರಲ್ಲಿ 2ಎ-13ಗುಂಟೆ** ಒಟ್ಟು **6ಎಕರೆ-18ಗುಂಟೆ** ಜಮೀನಿನಲ್ಲಿ **ಶ್ರೀ ಮೇ||ಶ್ರೀ ಸಾಯಿ ಅಸೋಸಿಯೇಟ್ಸ್** ರವರು ವಸತಿ ಬಡಾವಣೆ ಕೆಲಸವನ್ನು ಪ್ರಾರಂಭಿಸಲು, ಸದರಿಯವರು ನಿರ್ಮಿಸಲಿರುವ ಉದ್ದೇಶಿತ ವಸತಿ ಬಡಾವಣೆಗೆ ಬೇಕಾಗಿರುವ ನೀರನ್ನು ಪಂಚಾಯತಿ ವತಿಯಿಂದ ನೀಡುವಂತೆ ಗ್ರಾಮ ಪಂಚಾಯತಿಗೆ ಅರ್ಜಿ ಮತ್ತು ದಾಖಲೆಗಳು ಸಲ್ಲಿಸಿರುತ್ತಾರೆ.

ಸದರಿಯವರು ನೀರಿನ ಕೊರತೆಯನ್ನು ನೀಗಿಸಲು ನೀಡಿರುವ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ನಮ್ಮ ಗ್ರಾಮ ಪಂಚಾಯತಿಯಲ್ಲಿನ ಕೊಳವೆ ಬಾವಿಗಳ ನೀರು ಬಳಸಲು ಹಾಗೂ ಅನುಮೋದಿಸಿದ ಮತ್ತು ಅಭಿವೃದ್ಧಿ ಪಡಿಸಿದ ವಸತಿ ಬಡಾವಣೆಗಳನ್ನು ನಮ್ಮ ಗ್ರಾಮ ಪಂಚಾಯತಿಗೆ ವರ್ಗಾಯಿಸಿದ ನಂತರ ಕಾನೂನು ಅಡಿಯಲ್ಲಿ ನೀರು ಮತ್ತು ಇನ್ನಿತರ ಸೌಲಭ್ಯಗಳನ್ನು ಪಡೆಯಲು ಗ್ರಾಮ ಪಂಚಾಯತಿ ತೀರ್ಮಾನದಂತೆ ಗ್ರಾಮ ಪಂಚಾಯತಿಗೆ ಪಾವತಿಸಬೇಕಾದ ಮೊತ್ತವನ್ನು ಪಾವತಿಸಿಕೊಂಡು ತದನಂತರ ಲಭ್ಯತೆಯ ಆಧಾರದ ಮೇಲೆ ಕುಡಿಯುವ ನೀರನ್ನು ಒದಗಿಸಲಾಗುವುದು ಎಂದು ನೀರಾಕ್ಷೇಪಣಾ ಪತ್ರ ನೀಡಲಾಗಿರುತ್ತದೆ.

**ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ:**

1) ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: KPRC-DEV/198/2021, ಬೆಂಗಳೂರು, ದಿನಾಂಕ: 31-03-2022ರ ಎಲ್ಲಾ ನಿಯಮಗಳಿಗೆ ಒಳಪಟ್ಟಿರುತ್ತದೆ.

2) ಯೋಜನಾ ಪ್ರಾಧಿಕಾರ ಮತ್ತು KRERAದ ಎಲ್ಲಾ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

3) ಅಭಿವೃದ್ಧಿದಾರರು ಕಂದಾಯ ಇಲಾಖೆ, KPCB ಮತ್ತು ಸಂಬಂಧಪಟ್ಟ ಇಲಾಖಾ ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

4) ಪಂಚಾಯತ್ ಸಭೆಗಳ ನಿರ್ಣಯಕ್ಕೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

5) ಬಡಾವಣಾ ಅಭಿವೃದ್ಧಿದಾರರು ನೀರು ಸರಬರಾಜು ವ್ಯವಸ್ಥೆಗೆ ತಗಲುವ ವೆಚ್ಚ, ನಿರ್ವಹಣಾ ವೆಚ್ಚ ಮತ್ತು ಶುಲ್ಕಗಳನ್ನು ಸಂಪೂರ್ಣವಾಗಿ ಭರಿಸತಕ್ಕದು.

6) ಪಂಚಾಯತ್ ಗೆ ಪ್ರತ್ಯೇಕವಾಗಿ ಸಲ್ಲಿಸಿ ಮಾಲೀಕರು ಪಂಚಾಯತಿಯ ಷರತ್ತುಗಳು ಮತ್ತು ನಿಯಾಮಗಳಿಗೆ ಒಳಪಟ್ಟು ಸೂಚಿಸಿದ ಶುಲ್ಕಗಳನ್ನು ಮತ್ತು ಸೇವಾ ಶುಲ್ಕ ಪಾವತಿಸಲು ಬದ್ದರಿರಬೇಕು.

7) ಸದರಿ ಬಡಾವಣೆಯಲ್ಲಿ ನೀರು ಸರಬರಾಜು ಸಂಪರ್ಕಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವ ಜವಾಬ್ದಾರಿ ಅಭಿವೃದ್ಧಿದಾರರದಾಗಿರುತ್ತದೆ.

8) ನೀರು ಸರಬರಾಜು ವ್ಯವಸ್ಥೆ ಅಂದರೆ ಬಡಾವಣೆಯಲ್ಲಿ ಸರ್ಕಾರದ ನಿಯಮದ ಪ್ರಕಾರ ಪೈಪು, ವಾಲ್, ಚೆಂಬರ್ ಮತ್ತು ಇತರೆ ಅಳವಡಿಕೆ ಮಾಡಿ ಪಂಚಾಯತ್ ನ RWS ಇಂಜಿನಿಯರ್ ಪರಿಶೀಲಿಸಿ ದೃಢೀಕರಿಸಿದ ನಂತರ ಮಾತ್ರ ಹಸ್ತಾಂತರ ಪಡೆದು ಪಂಚಾಯತಿ ನೀರು ಸರಬರಾಜು ಮಾಡಲಾಗಿರುತ್ತದೆ.

ರವರಿಗೆ,
**ಮೇ|| ಶ್ರೀ ಸಾಯಿ ಅಸೋಸಿಯೇಟ್ಸ್,**
**ಬೆಂಗಳೂರು.**

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಕಗ್ಗಲೀಪುರ ಗ್ರಾಮ ಪಂಚಾಯಿತಿ
ಬೆಂಗಳೂರು ದಕ್ಷಿಣ, ಬೆಂಗಳೂರು ನಗರ